

بسم اللهِ الرّحمٰن الرّحيم

# ಅನುಗ್ರಹೀತ ಜರ್ಮನ್ ಸಂದರ್ಶನ – 2014

(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‍ರೂರ್ ಅಹ್ಮದ್**, ಅವರು ಲಂಡನ್‍ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **20-06-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ತಶಹ್ಹುಝ್, ತಅವ್ವುಝ್, ಸೂರತುಲ್ ಫಾತಿಹದ ತಿಲಾವತ್ ಮಾಡಿದನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಕಳೆದ ಎರಡು ಜುಮುಅ ಖುತುಬಗಳನ್ನು ಜರ್ಮನಿಗೆ ನಾನು ಹೋದ ಕಾರಣ ಅಲ್ಲಿ ನಿರ್ವಹಿಸಿದೆನು. ಜೂನ್ ಆರನೆಯ ದಿನಾಂಕದ ಖುತುಬ ಖಿಲಾಫತ್‍ಗೆ ವಿಧೇಯತೆ ಮತ್ತು ಖಿಲಾಫತ್ ಬಗ್ಗೆ ನಿಷ್ಠೆಯ ಬಗ್ಗೆ ನೀಡಿದ್ದೆ. ಆ ಖುತುಬ ಜರ್ಮನಿಯ ಅಹ್ಮದಿಯರನ್ನು ಮಾತ್ರವಲ್ಲ ಲೋಕದ ಎಲ್ಲಾ ಅಹ್ಮದಿಯರನ್ನು ಉದ್ದೇಶಿಸಿ ನೀಡಿದುದಾಗಿತ್ತು. ಜರ್ಮನಿಗೆ ಸಂಬಂಧಿಸಿ ಕೆಲವು ಉದಾಹರಣೆಗಳನ್ನು ಅಲ್ಲಿನ ಪರಿಸ್ಥಿತಿಗೆ ಅನುಸಾರವಾಗಿ ನೀಡಿದ್ದೆನು. ಲೋಕದಾದ್ಯಂತ ಅಹ್ಮದಿಯರು ಆ ಬಗ್ಗೆ ಉತ್ತಮ ಪ್ರತಿಕ್ರಿಯೆ ನೀಡಿದರು ಮತ್ತು ಖಿಲಾಫತ್ ಬಗ್ಗೆ ಪರಿಪೂರ್ಣ ವಿಧೇಯತೆ ಮತ್ತು ನಿಷ್ಠೆಯನ್ನು ಸೂಚಿಸಿದರು. ಅದರಿಂದ ನನಗೆ ಸಂತೋಷವಾಗಿದೆ. ಕೆಲವರು ಹೀಗೆ ಹೇಳಿದರು: ಕೆಲವು ಹುದ್ದೇದಾರರು ಖಲೀಫರ ಮಾರ್ಗದರ್ಶನಗಳ ಬಗ್ಗೆ ತಮ್ಮದೇ ವ್ಯಾಖ್ಯಾನ ನೀಡುತ್ತಾರೆ. ಇನ್ನು ಮುಂದೆ **ಇನ್‍ಶಾ ಅಲ್ಲಾಹ್** ಹೀಗೆ ಆಗಲಾರದು.

ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ ಜಮಾಅತಿನ ಸೌಂದರ್ಯವಾಗಿದೆ. ಅದರೊಂದಿಗೆ ಒಂದು ವಿಷಯವನ್ನು ಗಮನಿಸಲು ಹೇಳಿದರೆ ಕೂಡಲೇ ಅದರ ಕಡೆಗೆ ಗಮನ ಹರಿಸಲಾಗುತ್ತಿದೆ. ಅಲ್ಲಾಹನು ಎಲ್ಲಾ ಅಹ್ಮದಿಯರನ್ನು ಅನುಸರಣೆಯಲ್ಲೂ ನಿಷ್ಠೆಯಲ್ಲೂ ವರ್ಧಿಸುತ್ತಾ ಇರಲಿ. ಜಲ್ಸದ ನಂತರ ಸಾಮಾನ್ಯವಾಗಿ ನಾನು ಜಲ್ಸದ ಬಗ್ಗೆ ವಿವರಣೆ ನೀಡುತ್ತೇನೆ. ಆದುದರಿಂದ ನಾನು ಜರ್ಮನಿಗೆ ನನ್ನ ಪ್ರಯಾಣ ಮತ್ತು ಜಲ್ಸದ ಬಗ್ಗೆ ಈಗ ಸ್ವಲ್ಪ ವಿವರಿಸುವೆನು. ನಮ್ಮ ಜಲ್ಸಗಳಿಗೆ ಇತರ ಮುಸ್ಲಿಮರೂ ಮುಸ್ಲಿಮೇತರರೂ ಆಗಮಿಸಿ, ಅಹ್ಮದಿಯರು ಇಷ್ಟೆಲ್ಲಾ ಸಂಭ್ರಮದಿಂದ ಜಲ್ಸ ನಡೆಸುತ್ತಾರಲ್ಲ ಅದು ಹೇಗೆ ಇರಬಹುದು? ಅಹ್ಮದಿಯರು ಈ ಜಲ್ಸದ ಸಂದರ್ಭದಲ್ಲಿ ಹೇಗೆ ವರ್ತಿಸುತ್ತಾರೆ? ಅವರೇನು ಹೇಳುತ್ತಾರೆ? ಅಹ್ಮದಿಯರು ಒಳ್ಳೆಯ ಮಾತುಗಳನ್ನು ಆಡುವುದಾದರೆ ಅವರ ಕೆಲಸ ಅವುಗಳಿಗನುಸಾರವಾಗಿದೆಯೋ ಇಲ್ಲವೋ? ಲೌಕಿಕ ಜನರ ಹಾಗೆ ಜಮಾಯಿಸಿ ಕೇವಲ ಸಂಭ್ರಮಿಸುತ್ತಾರೆಯೇ? ಎಂದೆಲ್ಲಾ ನೋಡಲು ಅವರು ಬಯಸುತ್ತಾರೆ.

ಅವರು ಜಲ್ಸದಲ್ಲಿ ಬಹಳ ವಿಚಿತ್ರವಾದ ವಾತಾವರಣ ಕಾಣುತ್ತಾರೆ. ಈ ಜಲ್ಸವನ್ನು ಲೌಕಿಕ ಮೇಳಗಳೊಂದಿಗೆ ಮತ್ತು ಸಭೆಗಳೊಂದಿಗೆ ಹೋಲಿಸಲಾಗದೆಂದು ಅವರು ಕಾಣುತ್ತಾರೆ. ಮುಸ್ಲಿಮೇತರ ಅತಿಥಿಗಳಿಗೆ ಜಲ್ಸವು ಇಸ್ಲಾಮ್ ಧರ್ಮದ ಸುಂದರ ಉಪದೇಶಗಳನ್ನು ತಿಳಿಸಿಕೊಡಲು ಮತ್ತು ಅವರ ಸಂಶಯಗಳನ್ನು ನಿವಾರಿಸುವ ಒಂದು ಮಾರ್ಗವಾಗುತ್ತದೆ. ಅದೇರೀತಿ, ಕೆಲವು ಮುಸ್ಲಿಮೇತರರು ಮತ್ತು ಅಹ್ಮದಿಯೇತರರು ನೈಜ ಇಸ್ಲಾಮ್ ಆಗಿರುವ ಅಹ್ಮದಿಯ್ಯತ್ತಿನ ಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಗಳಿಸಿರುತ್ತಾರೆ. ಅಂಥವರು ಜಲ್ಸದ ವಾತಾವರಣವನ್ನೂ ಅದರ ಕಾರ್ಯಕ್ರಮಗಳನ್ನೂ ತಮ್ಮ ಕಣ್ಣುಗಳಿಂದ ಕಾಣುವಾಗ ಅವರಲ್ಲಿ ಕೆಲವರು ಬೈಅತ್ ಮಾಡಲು ಸಿದ್ಧರಾಗಿ ಬೈಅತ್ ಮಾಡಿ ಹೋಗುತ್ತಾರೆ. ಅಥವಾ ಅವರು ಎಷ್ಟು ಪ್ರಭಾವಿತರಾಗುತ್ತಾರೆ ಎಂದರೆ ಅವರ ಹೃದಯ ಸಂಪೂರ್ಣವಾಗಿ ಅಹ್ಮದಿಯ್ಯತ್ ಕಡೆಗೆ ಬಾಗುತ್ತದೆ. ಆದುದರಿಂದ ಜಲ್ಸ ಇಸ್ಲಾಮ್ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವಂತೆ ಮಾಡುತ್ತದೆಯಲ್ಲದೆ ತಬ್ಲೀಗ್‍ಗೆ ಬಹಳ ದೊಡ್ಡ ಒಂದು ಮಾರ್ಗವೂ ಆಗುತ್ತದೆ.

ಜರ್ಮನಿಯ ಜಲ್ಸ ಸಹ ನಿಶ್ಚಯವಾಗಿಯೂ ಇಂತಹ ಪ್ರಭಾವ ಬೀರಿತು. ಆದುದರಿಂದ ಈಗ ನಾನು ಜಲ್ಸಕ್ಕೆ ಆಗಮಿಸಿದ ಮುಸ್ಲಿಮೇತರ ಅತಿಥಿಗಳ ಮೇಲೆ ಉಂಟಾದ ಪ್ರಭಾವಗಳ ಬಗ್ಗೆ ಮೊದಲು ವಿವರಿಸುವೆನು. ಅಲ್ಲಾಹನು ಎಷ್ಟು ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ಸಹಾಯವನ್ನು ಪ್ರಕಟಿಸಿದನು ಎಂದು ವಿವರಿಸುವೆನು. ಏಕೆಂದರೆ ಹೃದಯ ಪರಿವರ್ತನೆ ಆಗುವುದು ಅಲ್ಲಾಹನ ಅನುಗ್ರಹದಿಂದಲೇ ಆಗಿದೆ. ಜಲ್ಸಕ್ಕೆ ಮಾತ್ರವಲ್ಲ ಜಮಾಅತಿನ ಇತರ ಕಾರ್ಯಕ್ರಮಗಳಿಗೂ ಅತಿಥಿಗಳನ್ನು ಆಮಂತ್ರಿಸಲಾಗುತ್ತದೆ. ಅವುಗಳು ಜಮಾಅತಿನ ಪರಿಚಯ ಮಾಡಿಸಿ ಕೊಡುವ ಬಹಳ ದೊಡ್ಡ ಮಾರ್ಗಗಳಾಗುತ್ತವೆ. ಪ್ರತಿಯೊಂದು ಕಾರ್ಯಕ್ರಮ ಇಸ್ಲಾಮಿನ ಸುಂದರ ತತ್ವಗಳನ್ನು ವಿವರಿಸಲು ಮತ್ತು ತಬ್ಲೀಗಿನ ಕ್ಷೇತ್ರವನ್ನು ತೆರೆಯುವ ಮಾರ್ಗವಾಗುತ್ತದೆ. ಜರ್ಮನಿಯ ಪ್ರವಾಸದ ಕಾಲದಲ್ಲಿ ಮಸ್‍ಜಿದ್‍ಗಳಿಗೆ ಅಸ್ತಿಭಾರ ಹಾಕಲು ಮತ್ತು ಮಸ್‍ಜಿದ್‍ಗಳನ್ನು ಉದ್ಘಾಟಿಸಲು ಸಂದರ್ಭಗಳು ಲಭಿಸಿದುವು. ಅಲ್ಲಿ ಸಹ ಇಸ್ಲಾಮಿನ ಸುಂದರ ತತ್ವಗಳು ಜನರಿಗೆ ಸ್ಪಷ್ಟವಾದುವು. ಕೆಲವರು ಹೇಳಿದರು: ಈ ಇಸ್ಲಾಮನ್ನು ಹಿಂದೆ ಯಾರೂ ನಮ್ಮ ಗಮನಕ್ಕೆ ತಂದಿರಲಿಲ್ಲ. ಪತ್ರಿಕೆಗಳು ಪ್ರಕಟಿಸಿದ ವರದಿಗಳಿಂದಲೂ ಹಲವು ಮಿಲಿಯ ಜನರಿಗೆ ಈ ಸಂದೇಶ ತಲಪಿತು. ಮೊದಲು ನಾನು ಜಲ್ಸಕ್ಕೆ ಆಗಮಿಸಿದ ಅಹ್ಮದಿಯೇತರರ ಅಭಿಪ್ರಾಯಗಳನ್ನು ವಿವರಿಸುವೆನು. ಜರ್ಮನಿಯ ಜಲ್ಸದಲ್ಲಿ ಸಮೀಪದ ದೇಶಗಳಿಂದ ಹೆಚ್ಚು ಸಂಖ್ಯೆಯಲ್ಲಿ ಪ್ರತಿನಿಧಿ ಸಂಘಗಳು ಆಗಮಿಸಿದ್ದುವು. ಫ್ರಾನ್ಸ್ ಮತ್ತು ಬೆಲ್‍ಜಿಯಮ್‍ನಿಂದ ಬೈಅತ್ ಮಾಡಿದವರು ಮತ್ತು ಜಮಾಅತಿನ ಬಗ್ಗೆ ಮಾಹಿತಿ ಗಳಿಸಿದವರು ಆಗಮಿಸಿದ್ದರು. ಮಾತ್ರವಲ್ಲ ಎಸ್ಟೋನಿಯಾ, ಕ್ರೊಯೇಶಿಯಾ, ಲಿಥುವೇನಿಯಾ, ಸ್ಲೊವೇನಿಯಾ, ರೊಮಾನಿಯ, ಹಂಗೇರಿ, ಮೊಂಟೆನಿಗ್ರೋ, ಬೋಸ್ನಿಯಾ ಹಾಗೂ ರಶ್ಯದ ದೇಶಗಳಿಂದ ಕೋಸೋವ, ಅಲ್‍ಬೇನಿಯಾ, ಬಲ್‍ಗೇರಿಯಾ, ಮೆಸಿಡೋನಿಯಾ ದೇಶಗಳಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಅವರಲ್ಲಿ ಮಕ್ಕಳು ಸಹ ಇದ್ದರು. ಪುರುಷರು, ಮಹಿಳೆಯರು, ತಬ್ಲೀಗ್ ಮಾಡಲ್ಪಡುವ

ಜನರು, ಮುಸ್ಲಿಮೇತರರು ಸಹ ಇದ್ದರು. ಮೆಸಿಡೋನಿಯಾದಿಂದ ಈ ವರ್ಷ 55 ಜನರ ತಂಡ ಆಗಮಿಸಿತ್ತು. ಅವರಲ್ಲಿ 28 ಕ್ರೈಸ್ತರು ಇದ್ದರು. 10 ಅಹ್ಮದಿಯೇತರ ಮುಸ್ಲಿಮರು ಮತ್ತು 17 ಅಹ್ಮದಿಯರು ಇದ್ದರು. ಅದೇರೀತಿ, ಬಲ್‌ಗೇರಿಯಾ ದೇಶದಿಂದ 82 ಜನರು ಆಗಮಿಸಿದ್ದರು. ಅವರು ದೀರ್ಘ ದೂರ ಪ್ರಯಾಣ ಮಾಡಿ ಬಂದವರಾಗಿದ್ದರು. ಈ ಪ್ರತಿನಿಧಿ ಸಂಘಗಳೊಂದಿಗೆ ಭೇಟಿ ನಡೆಯಿತು. ಜಲ್ಸದ ಆಧ್ಯಾತ್ಮಿಕ ವಾತಾವರಣ ಅವರಲ್ಲಿ ಉತ್ತಮ ಪ್ರಭಾವ ಬೀರಿತು. ಜಮಾಅತಿನ ಜನರ ಸೇವೆಯ ಮನೋಭಾವ, ಅತಿಥಿ ಸತ್ಕಾರ ಮೊದಲಾದವುಗಳನ್ನು ಎಲ್ಲರೂ ಮೆಚ್ಚಿದರು. ಮೆಸಿಡೋನಿಯ ದೇಶದಿಂದ ಆಗಮಿಸಿದ 55 ಜನರು ಅಂದಾಜು ಎರಡು ಸಾವಿರ ಕಿಲೋಮೀಟರ್ ಪ್ರಯಾಣ ಮಾಡಿ ಆಗಮಿಸಿದ್ದರು. ಅವರೊಂದಿಗೆ ಇಬ್ಬರು ಪತ್ರಕರ್ತರೂ ಫೋಟೋಗ್ರಾಫರರೂ ಇದ್ದರು. ಅವರು ಅಲ್ಲಿನ ಜಲ್ಸದ ಕಾರ್ಯಕ್ರಮಗಳನ್ನು ರೆಕಾರ್ಡ್ ಮಾಡುತ್ತಿದ್ದರು. ತಮ್ಮ ಟಿ.ವಿ. ಚ್ಯಾನಲ್‌ಗಳಲ್ಲಿ ಅವುಗಳನ್ನು ಪ್ರದರ್ಶಿಸುವುದಾಗಿ ಅವರು ಹೇಳಿದರು. ಮೆಸಿಡೋನಿಯಾದ ಈ ಜನರ ಪೈಕಿ 9 ಜನರು ಜಲ್ಸದ ಕೊನೆಯ ದಿನ ಬೈಅತ್ ಮಾಡಿದರು.

ಒಬ್ಬ ಅತಿಥಿ ಸರಕಾರಿ ನೌಕರರಾಗಿದ್ದಾರೆ. ಅವರು ಹೇಳಿದರು: ನಾನು ಇಲ್ಲಿಗೆ ಆಗಮಿಸಿ ಧರ್ಮದ ಬಗ್ಗೆ ನನ್ನ ತಿಳುವಳಿಕೆ ವರ್ಧಿಸಿದೆ. ಜಲ್ಸದಲ್ಲಿನ ಪ್ರಭಾಷಣಗಳು ನನ್ನಲ್ಲಿ ಬಹಳಷ್ಟು ಪ್ರಭಾವ ಬೀರಿದೆ. ಖಲೀಫರ ಭಾಷಣಗಳನ್ನು ಆಲಿಸಿದಾಗ ಇಸ್ಲಾಮಿನ ಬಗ್ಗೆ ನನ್ನ ಅಭಿಪ್ರಾಯ ಬದಲಾಯಿಸಿದೆ. ಇಸ್ಲಾಮ್ ಹಿಂಸೆಯನ್ನು ಪ್ರತಿಪಾದಿಸುತ್ತದೆ ಎಂದು ಮೊದಲು ನಾನು ಭಾವಿಸಿದ್ದೆನು. ಈಗ ನಾನು ನನ್ನ ಅಭಿಪ್ರಾಯ ಬದಲಾಯಿಸಿರುವೆನು. ಇಸ್ಲಾಮ್ ಶಾಂತಿಯ ಧರ್ಮವಾಗಿದೆ.

ಮೆಸಿಡೋನಿಯಾದಿಂದ ಆಗಮಿಸಿದ ಮತ್ತೋರ್ವ ಅಹ್ಮದಿಯೇತರ ಮುಸ್ಲಿಮ್ ಹೇಳಿದರು: "ಎಲ್ಲಾ ಧರ್ಮಗಳನ್ನು ಪ್ರೀತಿಯಿಂದ ಒಗ್ಗೂಡಿಸಬೇಕೆಂದು ಹೇಳುತ್ತಿದ್ದೀರಿ. ನಾವು ಈಗಾಗಲೇ ಅದರ ಪ್ರಯತ್ನದಲ್ಲಿ ಏರ್ಪಟ್ಟಿದ್ದೇವೆ" ಎಂದು. ಅನಂತರ ಆ ಅತಿಥಿಗೆ ಲಂಡನಿನ ಗಿಲ್ಡ್ ಹಾಲ್‌ನಲ್ಲಿ ನಡೆದ ಸಮಾರಂಭದ ವೀಡಿಯೋ ತೋರಿಸಲಾಯಿತು. ಅದು ಅವರ ಮೇಲೆ ಉತ್ತಮ ಪ್ರಭಾವ ಬೀರಿತು.

ಅಲ್‌ಬೇನಿಯಾದಿಂದ 21 ಜನರು ಆಗಮಿಸಿದ್ದರು. ಅವರಲ್ಲಿ ಹತ್ತು ಅಹ್ಮದಿಯೇತರರೂ 11 ಅಹ್ಮದಿಯರೂ ಇದ್ದರು. ಒಬ್ಬ ವ್ಯಕ್ತಿ ದೀರ್ಘಕಾಲ ಸೈನ್ಯದಲ್ಲಿ ಕೆಲಸ ಮಾಡಿ ಈಗ ನಿವೃತ್ತರಾಗಿದ್ದಾರೆ. ಅವರು ಹೇಳುತ್ತಾರೆ: "ಈ ಜಲ್ಸದಲ್ಲಿ ಕಂಡಂತಹ ಶಿಸ್ತು ನಾನು ಬೇರೆ ಎಲ್ಲಿಯೂ ಕಾಣಲಿಲ್ಲ. ಜಮಾಅತಿನ ಜನರು ಸ್ವಯಂ ಸೇವಕರಾಗಿ ದುಡಿಯುವುದನ್ನು ಕಾಣುವಾಗ ಬಹಳ ಸಂತೋಷವಾಗುತ್ತದೆ. ಚಿಕ್ಕ ಮಕ್ಕಳು ಅತಿಥಿಗಳಿಗೆ ನೀರನ್ನು ತಂದುಕೊಟ್ಟು ಬಹಳ ಸಂತೋಷಪಡುತ್ತಿದ್ದರು." ರೊಮೇನಿಯಾದಿಂದ ಆಗಮಿಸಿದವರಲ್ಲಿ ಸಿರಿಯಾ ದೇಶದ ಒಬ್ಬ ಸ್ನೇಹಿತರೂ ಇದ್ದರು. ಅವರ ಹೆಸರು ಹುಸೈನುಲ್ ಹಾಫಿಝ್ ಸಾಹಿಬ್. ಅವರು ದೀರ್ಘಕಾಲದಿಂದ ರೊಮೇನಿಯಾದಲ್ಲಿ ವಾಸಿಸುತ್ತಿದ್ದಾರೆ. ಅವರು ನಮ್ಮ ಓರ್ವ ಮುಬಲ್ಲಿಗರೊಂದಿಗೆ ಕೇಳಿದರು: ಖಲೀಫರನ್ನು ದೂರದಿಂದ ಮಾತ್ರ ನೋಡುವೆವೋ ಅಥವಾ ಹತ್ತಿರದಿಂದಲೂ ಕಾಣಲು ಸಾಧ್ಯವೇ? ಆಗ ಮುಬಲ್ಲಿಗರು ಖಲೀಫರನ್ನು ಭೇಟಿ ಆಗಬಹುದು ಎಂದು ಹೇಳಿದಾಗ ಅವರಿಗೆ ನಂಬಿಕೆ ಉಂಟಾಗಲಿಲ್ಲ. ಅವರು ಪದೇ ಪದೇ ಮುಬಲ್ಲಿಗರೊಂದಿಗೆ ಹೇಳುತ್ತಿದ್ದರು– ನಾನು ಖಲೀಫರನ್ನು ಪ್ರೀತಿಸುತ್ತೇನೆ. ಮುಸ್ಲಿಮರೆಲ್ಲರಿಗೆ ಒಬ್ಬ ಖಲೀಫತುಲ್ ಮುಸ್ಲಿಮೀನ್ ಇದ್ದರೆ ಎಲ್ಲಾ ಸಮಸ್ಯೆಗಳೂ ಪರಿಹರಿಸಲ್ಪಡುವುವು. ಏಕೆಂದರೆ ನಮಗೆ ಸರಿಯಾದ ಮಾರ್ಗವನ್ನು ತೋರಿಸಿಕೊಡಬಲ್ಲವರು ಖಲೀಫರೇ ಆಗಿದ್ದಾರೆ. ಭೇಟಿಯ ಸಂದರ್ಭದಲ್ಲೂ ಅವರು ಹೀಗೆಯೇ ಹೇಳಿದರು. ಅವರು ನಮ್ಮ ಮುಬಲ್ಲಿಗರೊಂದಿಗೆ ಖಲೀಫರನ್ನು ಹೇಗೆ ಚುನಾಯಿಸಲಾಗುತ್ತಿದೆ ಎಂದು ಕೇಳಿದರು. ಮುಬಲ್ಲಿಗ್ ಸಾಹೇಬರು ಹೇಳಿದರು: "ಖುಲಫಾವುರ್ರಾಶಿದೀನ್‌ರನ್ನು ಆರಿಸಿದ ರೀತಿಯಲ್ಲೇ ಅದು ನಡೆಯುತ್ತದೆ. ಖಲೀಫರನ್ನು ಚುನಾವಣೆ ಮಾಡುವವರಿಗೆ ಅಲ್ಲಾಹನು **ವಹೀ ಖಫೀ** (ರಹಸ್ಯ ವಹೀ) ಮೂಲಕ ಯಾರನ್ನು ಖಲೀಫರನ್ನಾಗಿ ಚುನಾಯಿಸಬೇಕೆಂದು ನಿರ್ದೇಶಿಸುತ್ತಾನೆ" ಎಂದು. ಆದರೆ, ಅದು ಅವರಿಗೆ ಅರ್ಥವಾಗಿರಲಿಲ್ಲ. ನಂತರ ಸಂಜೆಯ ವೇಳೆಗೆ ಅವರು "ನನ್ನ ಸಂಶಯ ನಿವಾರಣೆಯಾಗಿದೆ" ಎಂದು ಹೇಳಿದರು. ಅದು ಹೇಗೆಂದರೆ– ನಾನು ಲಜ್ನ ಸಭೆಯನ್ನು ಸಂಬೋಧಿಸಿ ಹೊರಗೆ ಬಂದಾಗ ಜನರು ಸಾಲಾಗಿ ನಿಂತುಕೊಂಡು ನನ್ನನ್ನು ನಮಾಝ್‌ಗೋಸ್ಕರ ಕಾಯುತ್ತಿದ್ದರು. ಅವರ ಜೊತೆಗೆ ಈ ಸಿರಿಯಾದ ವ್ಯಕ್ತಿ ಸಹ ಇದ್ದರು. ನಾನು ಅವರ ಸಮೀಪ ದಾಟಿಹೋಗುವಾಗ ಹಠತ್ತಾಗಿ ಅವರು ಕೈ ಎತ್ತಿ ನನಗೆ ಸಲಾಮ್ ಹೇಳಿದರು. ಈ ಸಂಭವದ ಬಗ್ಗೆ ಅವರು ಹೀಗೆ ಹೇಳುತ್ತಾರೆ: "ನಾನು ಕೈ ಎತ್ತಿ ಸಲಾಮ್ ಹೇಳಿದುದು ಉದ್ದೇಶಪೂರ್ವಕವಲ್ಲ. ಪಕ್ಕನೆ ಸಂಭವಿಸಿದುದಾಗಿದೆ. ಇದರ ಮೂಲಕ ಅಲ್ಲಾಹನ **ವಹೀ ಖಫೀ** (ರಹಸ್ಯ ವಹೀ) ಏನೆಂದು ನನಗೆ ತಿಳಿಯಿತು. ನಾನು ಸಾಮಾನ್ಯವಾಗಿ ಕೈ ಎತ್ತಿ ಯಾರಿಗೂ ಸಲಾಮ್ ಹೇಳುವುದಿಲ್ಲ. ಇದು ಸಂಭವಿಸಿದುದು ಅಲ್ಲಾಹನ ಪ್ರಭಾವದಿಂದಾಗಿದೆ."

ಅವರು ಜಮಾಅತಿನಿಂದ ಬಹಳಷ್ಟು ಪ್ರಭಾವಿತರಾಗಿದ್ದಾರೆ. ಅವರು ನನ್ನೊಂದಿಗೆ ಹೇಳಿದರು: "ಸ್ವಲ್ಪ ಯೋಚಿಸಲಿಕ್ಕಿದೆ. ಅನಂತರ **ಇನ್‌ಶಾ ಅಲ್ಲಾಹ್** ಜಮಾಅತಿಗೆ ಸೇರುವೆನು."

ಲಿಥುವೇನಿಯಾದ ಯುನಿವರ್ಸಿಟಿಯಿಂದ ಮೂವರು ಅತಿಥಿಗಳು ಆಗಮಿಸಿದ್ದರು. ಒಬ್ಬ ವಿದ್ಯಾರ್ಥಿ ಹೀಗೆ ಹೇಳಿದರು: ಇಸ್ಲಾಮಿನ ಬಗ್ಗೆ ಕಡಿಮೆ ಜ್ಞಾನ ಹೊಂದಿದ ಮತ್ತು ತಪ್ಪು ಅಭಿಪ್ರಾಯ ಹೊಂದಿರುವ ಪಾಶ್ಚಾತ್ಯ ಚಿಂತಕರಿಗೆ ಈ ಜಲ್ಸ ಬಹಳ ಉಪಯೋಗಕರವಾಗಿದೆ. ಈ ಜಲ್ಸ ಅವರ ಸಂಕುಚಿತ ಮನೋಭಾವವನ್ನು ವಿಶಾಲಗೊಳಿಸುವುದು. ನೀವೆಲ್ಲರೂ ಬಹಳ ಗುಣಾತ್ಮಕ ಮನೋಭಾವದವರಾಗಿದ್ದೀರಿ. ನೀವು ಯಾವಾಗಲೂ ಮುಗುಳು ನಗೆಯಿಂದ ಸ್ವಾಗತಿಸುತ್ತಿರುವಿರಿ. ಅವರು ನನ್ನನ್ನೂ ಭೇಟಿಯಾಗಿದ್ದರು. ಅದು ಅವರ ಮೇಲೆ ಒಳ್ಳೆಯ ಪ್ರಭಾವ ಉಂಟುಮಾಡಿದೆ.

ಡೊಮಿನಿಕ್ ಎಂಬ ಒಬ್ಬ ಅತಿಥಿ ಹೇಳಿದರು: ಖಲೀಫರ ಭಾಷಣದಿಂದ ನಮ್ಮ ಜ್ಞಾನ ವರ್ಧಿಸಿತು. ನಮಗೆ ಮೊದಲು ಜಮಾಅತಿನ ಕುರಿತು ಸ್ವಲ್ಪ ಪರಿಚಯ ಆಗಿತ್ತು. ಈಗ ಭಾಷಣ ಆಲಿಸಿದ ನಂತರ ಹೆಚ್ಚು ವಿಷಯಗಳು ತಿಳಿದುವು. ಇನ್ನೊಬ್ಬ ಅತಿಥಿ ಹೇಳಿದರು:

ಸೌಹಾರ್ದ ಮತ್ತು ಸಮತ್ವದ ಬಗ್ಗೆ ನೀವು ಮಾಡಿದ ಭಾಷಣ ಬಹಳ ಉನ್ನತ ಮಟ್ಟದ್ದಾಗಿದೆ. ಜರ್ಮನಿಯ ನಿಯಮಗಳಿಗೆ ಅನುಸಾರವಾಗಿ ಆ ತತ್ವಗಳಿವೆ. ನನ್ನೊಂದಿಗೆ ಯುನಿವರ್ಸಿಟಿಯಲ್ಲಿ ಒಬ್ಬ ಅಹ್ಮದಿ ವಿದ್ಯಾರ್ಥಿ ಕಲಿಯುತ್ತಿದ್ದಾರೆ. ಅವರ ವರ್ತನೆಗಳಿಂದ ಅಹ್ಮದಿ ಮುಸ್ಲಿಮ್ ಮತ್ತು ಇತರ ಮುಸ್ಲಿಮರಲ್ಲಿ ಬಹಳಷ್ಟು ವ್ಯತ್ಯಾಸವಿದೆ ಎಂದು ತಿಳಿದು ಬರುತ್ತದೆ.

ನಮ್ಮ ನಡೆತೆಗಳ ಈ ವ್ಯತ್ಯಾಸವನ್ನು ಪ್ರತಿ ಕ್ಷೇತ್ರದಲ್ಲಿಯೂ ನಾವು ಕಾಣಿಸಬೇಕಾಗಿದೆ. ಅದು ತಬ್ಲೀಗ್ ಮಾಡಲು ಬಹಳ ದೊಡ್ಡ ಮಾರ್ಗವಾಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕು. ತನ್ನ ವರ್ತನೆಗಳನ್ನು ಅನ್ಯರು ಗಮನಿಸುತ್ತಿದ್ದಾರೆ ಎಂದು.

ಒಬ್ಬ ಜರ್ಮನ್ ವ್ಯಕ್ತಿ ಹೇಳುತ್ತಾರೆ: ಖಲೀಫರು ಮಾಡಿದ ಭಾಷಣವನ್ನು ನಾನು ಬರೆದ ಹಾಗೆ ನನಗೆ ತೋರುತ್ತದೆ. ಏಕೆಂದರೆ ಅದರ ಪ್ರತಿಯೊಂದು ಶಬ್ದ ನನ್ನ ಹೃದಯದ ಧ್ವನಿಯಾಗಿದೆ.

ಒಬ್ಬ ಮಹಿಳೆ ಹೇಳಿದರು: ಖಲೀಫತುಲ್ ಮಸೀಹರು ಡಾಕ್ಟರ್ ಮಹ್ದೀ ಅಲಿಯವರ ಶಹಾದತ್ ಬಗ್ಗೆ ಪ್ರಸ್ತಾಪಿಸಿದಾಗ ನನಗೆ ಸಹಿಸಲಾಗದ ದುಃಖವುಂಟಾಯಿತು, ನಾನು ಅತ್ತೆನು. ಬಳಿಕ ಈ ಶಹಾದತ್‌ನ ಹೊರತಾಗಿಯೂ ಜಮಾಅತಿನ ಸೇವೆಯ ಮನೋಭಾವದಲ್ಲಿ ಯಾವುದೇ ಕೊರತೆ ಉಂಟಾಗಲಾರದೆಂದೂ ನಾವು ಮಾನವ ಸೇವೆಯಲ್ಲಿ ಮುಂದೆ ಮುಂದೆ ಸಾಗುವೆವು ಎಂದೂ ಹೇಳಿದಾಗ ನಾನು ನನ್ನ ಭಾವೋದ್ವೇಗಗಳನ್ನು ತಡೆಯಲಾರದಾದೆನು.

ಒಬ್ಬ ಮಹಿಳೆ ಹೇಳಿದರು: ನಾನು ಭಾಷಣದಿಂದ ಬಹಳ ಪ್ರಭಾವಿತೆಯಾದೆನು. ವಿಶಿಷ್ಟವಾಗಿ ಶಾಂತಿ ಸ್ಥಾಪನೆಯ ಬಗ್ಗೆ ಪ್ರಸ್ತಾಪಿಸುತ್ತಾ ಎಲ್ಲಾ ಜನರು ಜಾತಿ ಜನಾಂಗ ವ್ಯತ್ಯಾಸವನ್ನು ಕಡೆಗಣಿಸಿ ಪರಸ್ಪರ ಪ್ರೀತಿಸಬೇಕೆಂದೂ ಪರಸ್ಪರ ಹಗೆತನದಿಂದ ವರ್ತಿಸಬಾರದೆಂದೂ ಹೇಳಿದಾಗ ಸಮಾರಂಭಕ್ಕೆ ಜಮಾಅತಿನ ಜನರನ್ನು ಮಾತ್ರವಲ್ಲ ರಾಜಕೀಯ ವ್ಯಕ್ತಿಗಳನ್ನೂ ಮಾತ್ರವಲ್ಲ ನೆರೆಹೊರೆಯರನ್ನೂ ಕರೆಯಲಾಗಿತ್ತು. ಇದು ನನ್ನ ಮೇಲೆ ಪ್ರಭಾವ ಬೀರಿದೆ.

ಮಸ್‌ಜಿದ್‌ಗಳ ಉದ್ಘಾಟನೆಯ ಮೂಲಕ ತಬ್ಲೀಗ್‌ಗೆ ಹೆಚ್ಚು ಸಂದರ್ಭ ಸಿಗುತ್ತದೆ ಎಂಬುದರ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಒಂದು ಮಸ್‌ಜಿದ್ ನಿರ್ಮಾಣವಾದಾಗ ಆ ಪ್ರದೇಶದ ಅಹ್ಮದಿಯರ ಹೊಣೆಗಾರಿಕೆ ಹೆಚ್ಚಾಗುತ್ತದೆ.

ಜರ್ಮನಿಯ ಜಲ್ಸದ ಮೂರನೆಯ ದಿನ ಅಲ್ಲಾಹನ ಅನುಗ್ರಹದಿಂದ ಬೈಅತ್‌ಗಳು ಸಹ ನಡೆಯಿತು. ಈ ಸಲ ಅಲ್ಲಿ ಹಾಜರಿದ್ದ ಹತ್ತೊಂಬತ್ತು ದೇಶಗಳ ಎಂಬತ್ತಮೂರು ಜನರು ಬೈಅತ್ ಮಾಡುವ ಭಾಗ್ಯ ಗಳಿಸಿದರು.

ಬೈಅತ್ ಮಾಡಿದ ಕೆಲವು ಜನರ ಬಗ್ಗೆ ಹೇಳಲು ಬಯಸುತ್ತೇನೆ. ಮೊರೋಕ್ಕೋ ದೇಶದ ಅಬ್ದುಲ್ ಖಾದಿರ್ ಸಾಹೇಬ್ ಹೇಳುತ್ತಾರೆ: ಆರು ವರ್ಷದ ಮೊದಲು ಜಮಾಅತ್ ಬಗ್ಗೆ ಪರಿಚಯ ಗಳಿಸಿದೆ. ಕೆಲವು ವಾರಗಳ ಹಿಂದೆ ಜಮಾಅತಿನ ಒಂದು ನಮಾಝ್ ಮಾಡುವ ಸ್ಥಳಕ್ಕೆ ಹೋಗಿ ಹೆಚ್ಚಿನ ಮಾಹಿತಿ ಗಳಿಸಿದೆ. ನಂತರ ನಮಾಝ್ ಮತ್ತು ಜುಮುಅಗಳಲ್ಲಿ ಭಾಗವಹಿಸಲು ತೊಡಗಿದೆ. ಜರ್ಮನಿ ಜಲ್ಸಕ್ಕೆ ನನಗೆ ಆಮಂತ್ರಣ ಲಭಿಸಿತು. ನಾನು ಜಲ್ಸದಲ್ಲಿ ಆಧ್ಯಾತ್ಮಿಕ ವಾತಾವರಣ, ಖಲೀಫರೊಂದಿಗೆ ಜಮಾಅತಿನ ಜನರ ಪ್ರೀತಿ ಮತ್ತು ಅನುಸರಣೆ ನೋಡಿ ನನ್ನಲ್ಲಿ ಅಸಾಧಾರಣ ಬದಲಾವಣೆ ಉಂಟಾಯಿತು. ಇದು ಸತ್ಯವಂತರ ಜಮಾಅತ್ ಎಂದು ನನಗೆ ದೃಢವಾಯಿತು. ನಾನು ಜಮಾಅತಿಗೆ ಸೇರಲು ನಿರ್ಧರಿಸಿದೆ.

ಸ್ವೀಡನ್‌ನಿಂದ ಒಬ್ಬ ಇರಾಕ್ ದೇಶದ ವ್ಯಕ್ತಿ ಬಂದಿದ್ದರು. ಅವರು ಹೇಳುತ್ತಾರೆ– ಜಲ್ಸದ ವಾತಾವರಣ ನೋಡಿ ಬಹಳ ಪ್ರಭಾವಿತನಾದೆನು. ನಾನು ಅನ್ವೇಷಿಸುತ್ತಾ ಇದ್ದ ಸತ್ಯವಾದ ಜಮಾಅತ್ ಇದೇ ಆಗಿದೆ. ಈ ಅಹ್ಮದಿಯಾ ಜಮಾಅತ್ ನನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ತರವಾಗಿದೆ. ಅವರು ಜಲ್ಸದಲ್ಲಿ ಬೈಅತ್ ಮಾಡಿದರು.

ಫ್ರಾನ್ಸ್‌ನಿಂದ ಬಂದ ಒಬ್ಬರು ಹೇಳಿದರು: ನಾನು ಕ್ರೈಸ್ತ ಕುಟುಂಬದಲ್ಲಿ ಜನಿಸಿದವನಾಗಿದ್ದೇನೆ. ಆದರೆ ನಾನು ಯಾವುದೇ ಧರ್ಮ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡುತ್ತಾ ಇಲ್ಲ. ನಾನು ನನ್ನ ತಂದೆ ತಾಯಂದಿರು ಹೇಳಿದ ಪ್ರಕಾರ ಚರ್ಚ್‌ಗೆ ಹೋದೆ. ಅಲ್ಲಿ ಯೇಸುಕ್ರಿಸ್ತರ ಮೂರ್ತಿ ಇರಿಸಲಾಗಿತ್ತು. ನಾನು ದೇವನೊಂದಿಗೆ ಪ್ರಾರ್ಥಿಸಬೇಕೋ ಈ ಮೂರ್ತಿಯೊಂದಿಗೆ ಪ್ರಾರ್ಥಿಸಬೇಕೋ ಎಂದು ನನಗೆ ತಿಳಿಯಲಿಲ್ಲ. ಹೀಗಿರುತ್ತಾ ನನಗೆ ಅಹ್ಮದಿಯಾ ಜಮಾಅತಿನ ಕೆಲವು ವ್ಯಕ್ತಿಗಳ ಪರಿಚಯವಾಯಿತು. ಅವರು ನನಗೆ ಜಮಾಅತ್ ಬಗ್ಗೆ ತಿಳಿಸಿದರು. ಇಸ್ಲಾಮ್ ಧರ್ಮ ತತ್ವಜ್ಞಾನವೆಂಬ ಪುಸ್ತಕ ಓದಲು ಕೊಟ್ಟರು. ನಾನು ಜರ್ಮನ್ ಜಲ್ಸಕ್ಕೆ ಆಗಮಿಸಿದೆ. ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಆಲಿಸಿದೆ. ನನ್ನ ಹೃದಯ ಬದಲಾವಣೆಗೊಂಡಿತು. ನಾನು ಜಲ್ಸದ ಮೂರನೆಯ ದಿನ ಬೈಅತ್ ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದೆ. ಈ ವ್ಯಕ್ತಿ ಫ್ರಾನ್ಸ್ ದೇಶದ ಫ್ರೆಂಚ್ ನಾಗರಿಕರಾಗಿದ್ದಾರೆ.

ಫ್ರಾನ್ಸ್ ದೇಶದಿಂದ ಆಗಮಿಸಿದ ಒಬ್ಬ ಅರಬಿ ಅಹ್ಮದಿ, ಹಿಂದಿನ ಒಂದು ಘಟನೆಯನ್ನು ಸ್ಮರಿಸುತ್ತಾ ಹೀಗೆ ಹೇಳಿದರು– "ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ಮೃತರಾಗುವ ಸ್ವಲ್ಪ ಸಮಯದ ಮೊದಲು ನನಗೆ ಸ್ವಪ್ನದಲ್ಲಿ ಒಬ್ಬರು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಪಠಿಸುವುದಾಗಿ ಕೇಳಿಸಿತು. **ಯಾ ಅಯ್ಯತುಹನ್ನಫ್‌ಸುಲ್ ಮುತ್‌ಮಇನ್ನತುರ್‌ಜಿಈ ಇಲಾ ರಬ್ಬಿಕಿ ರಾಝಿಯತನ್ ಮರ್‌ಝಿಯ್ಯ ಫದ್‌ಖುಲೀ ಫೀ ಇಬಾದೀ ವದ್‌ಖುಲೀ ಜನ್ನತೀ.** ಅರ್ಥ: **ಓ ಶಾಂತಿ ಪಡೆದ ಆತ್ಮವೇ, ನೀನು ಅಲ್ಲಾಹನ ಕಡೆಗೆ ಮರಳು– ನೀನು ಅವನಲ್ಲಿ ಸಂತೃಪ್ತನೂ ಅವನು ನಿನ್ನಲ್ಲಿ ಸಂತೃಪ್ತನೂ ಆದ ಸ್ಥಿತಿಯಲ್ಲಿ. ನನ್ನ ಭಕ್ತದಾಸರೊಂದಿಗೆ ಸೇರಿಕೋ ಹಾಗೂ ನನ್ನ ಸ್ವರ್ಗದಲ್ಲಿ ಪ್ರವೇಶಿಸಿಕೋ. (90: 28–31)** ಅನಂತರ ಸ್ವಪ್ನದಲ್ಲಿಯೇ ಒಬ್ಬ ಯುವಕನನ್ನು ಕಂಡೆನು. ಅವರನ್ನು ತೋರಿಸಿ "ಇವರು ನಿಮ್ಮ ಹೊಸ ಖಲೀಫ" ಎಂದು ಹೇಳಲಾಗಿತ್ತು. ಈ ಸ್ವಪ್ನ ಕಂಡ ನಂತರ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಮೃತರಾದರು. ಖಲೀಫರ ಚುನಾವಣೆ ನಡೆದಾಗ ನನಗೆ ನನ್ನ ಸ್ವಪ್ನ ನೆನಪಿಗೆ ಬಂತು. ಚಿತ್ರವನ್ನು ನೋಡಿದಾಗ ನಾನು ಕನಸಿನಲ್ಲಿ ಕಂಡ ವ್ಯಕ್ತಿ ನೀವೇ ಎಂದು ತಿಳಿಯಿತು.

ಮೇಲೆ ವಿವರಿಸಿದ ಘಟನೆಗಳು ಅಲ್ಲಾಹನ ವಿಶಿಷ್ಟ ನೆರವನ್ನು ಸೂಚಿಸುತ್ತದೆ. ಜಲ್ಸದ ಸಂದರ್ಭದಲ್ಲಿ, ಮಸ್‌ಜಿದ್‌ಗಳ ಉದ್ಘಾಟನೆ ಮಾಡುವಾಗ ಮತ್ತು ಅಸ್ತಿಭಾರ ಹಾಕುವಾಗ ಅಲ್ಲಾಹನ ಅನುಗ್ರಹಗಳ ದೃಶ್ಯಗಳು ನಮಗೆ ಕಾಣಿಸುತ್ತವೆ.

ಇನ್ನು ನಾನು ನಮ್ಮೆಲ್ಲರ ಬಗ್ಗೆ ಪರಿಶೀಲನೆ ನಡೆಸುವ ಕುರಿತು ಹೇಳಲು ಬಯಸುತ್ತೇನೆ. ಅಲ್ಲಾಹನು ನಮಗೆ ತನ್ನ ಸಹಾಯದ ದೃಶ್ಯಗಳನ್ನು ತೋರಿಸುತ್ತಾ ಇರುವ ಬಗ್ಗೆ ನಾವು ಅಲ್ಲಾಹನಿಗೆ ಕೃತಜ್ಞರಾಗಬೇಕಾಗಿದೆ. ನಾವು ಇನ್ನೊಂದು ವಿಷಯದ ಬಗ್ಗೆ ಚಿಂತಿಸಬೇಕಾಗಿದೆ. ನಮ್ಮ ಪೈಕಿ ಯಾರಾದರೊಬ್ಬನ ನ್ಯೂನತೆಯ ಕಾರಣದಿಂದ ಅಥವಾ ನಮ್ಮಲ್ಲಿ ಕೆಲವರ ದೌರ್ಜ್ಯನದ ಕಾರಣದಿಂದ ನಾವು ಅಲ್ಲಾಹನ ಈ ಅನುಗ್ರಹಗಳಿಂದ ವಂಚಿತರಾಗದಂತೆ ಬಹಳ ಜಾಗರೂಕರಾಗಿರಬೇಕಾಗಿದೆ. ಅನ್ಯರು ನಮ್ಮಲ್ಲಿ ಒಳ್ಳೆಯದನ್ನೇ ಕಾಣುತ್ತಾರೆ. ಆದರೆ ನಾವು ನಮ್ಮ ಲೋಪದೋಷಗಳ ಬಗ್ಗೆ ಗಮನಿಸಬೇಕಾಗಿದೆ– ನಾವು ನಮ್ಮ ಸ್ಥಿತಿಗಳನ್ನು ಮತ್ತು ನಮ್ಮ ಕೆಲಸಗಳನ್ನು ಹೇಗೆ ಇನ್ನೂ ಉತ್ತಮ ಪಡಿಸಬಹುದು ಎಂದು. ವಿಶಿಷ್ಟವಾಗಿ ಎಲ್ಲಾ ಹುದ್ದೇದಾರರು ಮತ್ತು ಅದರಲ್ಲೂ ವಿಶಿಷ್ಟವಾಗಿ ನ್ಯಾಶನಲ್ ಹುದ್ದೇದಾರರು ಮತ್ತು ಕೇಂದ್ರದ ಹುದ್ದೇದಾರರು ಈ ರೀತಿಯ ಪರಿಶೋಧನೆ ಅಗತ್ಯವಾಗಿ ನಡೆಸಬೇಕಾಗಿದೆ. ಜರ್ಮನಿಯ ಅಮೀರ್ ಸಾಹೇಬರು ಅಲ್ಲಿನ ಹುದ್ದೇದಾರರ ಕುಂದು ಕೊರತೆಗಳ ಬಗ್ಗೆ ಕ್ಷಮೆ ಯಾಚಿಸಿ ನನಗೆ ಪತ್ರ ಬರೆದಿರುವರು. ಆದರೆ ಹೀಗೆ ಕ್ಷಮೆ ಯಾಚಿಸಿ ಪತ್ರ ಬರೆದರೆ ಸಾಕಾಗಲಾರದು. ವರ್ಷವಿಡೀ ತಮ್ಮ ಕೆಲಸಗಳನ್ನು ಪರಿಶೀಲಿಸಿ ತಪ್ಪುಗಳನ್ನು ನಿವಾರಿಸಿ ಕೆಲಸದಲ್ಲಿ ಸುಧಾರಣೆ ಮಾಡಲು ಪ್ರಯತ್ನಿಸದಿದ್ದರೆ ಕ್ಷಮೆ ಯಾಚನೆಯಿಂದ ಮಾತ್ರ ಯಾವ ಪ್ರಯೋಜನವೂ ದೊರಕಲಾರದು.

ಪ್ರಾಯಶಃ ಮೆಸಿಡೋನಿಯಾ ದೇಶದಿಂದ ಆಗಮಿಸಿದ ಒಬ್ಬ ಪತ್ರಕರ್ತೆ ನನ್ನೊಂದಿಗೆ ವಿಚಾರಿಸಿದರು: ಜಲ್ಸದ ಎಲ್ಲಾ ವ್ಯವಸ್ಥೆಗಳ ಬಗ್ಗೆ ನಿಮಗೆ ತೃಪ್ತಿಯಾಗಿದೆಯೇ? ಎಂದು. ಪ್ರಶ್ನೆ ಕೇಳಿದವರ ಉದ್ದೇಶವೇನೆಂಬುದನ್ನು ಅಲ್ಲಾಹನೇ ಚೆನ್ನಾಗಿ ಬಲ್ಲನು. ಆಕೆ ಜಲ್ಸದ ವ್ಯವಸ್ಥೆಯ ಕೆಲವು ಕೊರತೆಗಳ ಬಗ್ಗೆ ಸೂಚಿಸುತ್ತಿರಲೂಬಹುದು. ನಾನೇನಾದರೂ ಆಕೆಗೆ ಉತ್ತರವಾಗಿ, “ಶೇಕಡಾ ನೂರರಷ್ಟು ತೃಪ್ತನಾಗಿದ್ದೇನೆ” ಎಂದು ಹೇಳುತ್ತಿದ್ದರೆ ಆಕೆ ಇನ್ನೊಂದು ಪ್ರಶ್ನೆ ಕೇಳುತ್ತಿದ್ದಳು. ಆದರೆ, ನಾನು ಆಕೆಯೊಂದಿಗೆ ಹೇಳಿದೆ: “ಅಭಿವೃದ್ಧಿ ಹೊಂದುತ್ತಿರುವ ಸಮುದಾಯಗಳು ಉತ್ತಮ ಸ್ಥಿತಿಯಿಂದ ಅತ್ಯುತ್ತಮ ಸ್ಥಿತಿಗೆ ತಲಪಲು ಪ್ರಯತ್ನಿಸುತ್ತಾ ಇರುತ್ತದೆ. ಕೆಲವು ಜನರ ಹೊಗಳಿಕೆಯ ಮಾತುಗಳನ್ನು ಆಲಿಸಿ ‘ನಾವು ಮಾಡಬೇಕಾದುದನ್ನೆಲ್ಲಾ ಮಾಡಿದೆವು’ ಎಂದು ತೃಪ್ತರಾಗಲು ಸಾಧ್ಯವಿಲ್ಲ. ನಾವು ಮಾಡಿದ ಕೆಲಸಗಳಲ್ಲಿ ಸಂಭವಿಸಿದ ಲೋಪದೋಷಗಳನ್ನು ಮರೆತು ಬಿಡುವಂತೆಯೂ ಇಲ್ಲ.” ಎಂದು ನಾನು ಹೇಳಿದಾಗ ಆಕೆ ಸುಮ್ಮನಾದಳು.

ಆದುದರಿಂದ ಮಾಡುವ ಕೆಲಸವನ್ನು ಉತ್ತಮವಾದ ರೀತಿಯಲ್ಲಿ ಮಾಡಲು ಪ್ರಯತ್ನಿಸಬೇಕಾಗಿದೆ. ಕೇವಲ ಬಾಯಿ ಮಾತುಗಳಿಂದ ಯಾವ ಪ್ರಯೋಜನವೂ ಸಿಗಲಾರದು. ಶ್ರದ್ಧೆ ವಹಿಸಿ ಕಾರ್ಯಪ್ರವೃತ್ತರಾದರೆ ಮಾತ್ರ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ. ಕೆನಡದ ಜಮಾಅತ್‌ನಲ್ಲಿ ಸಹ ಒಂದು ವರ್ಷ ಇದೇ ರೀತಿ ಆಗಿತ್ತು. ನಾನು ಅವರ ಗಮನವನ್ನು ಅದರ ಕಡೆಗೆ ಸೆಳೆದೆ. ಅವರು ನನ್ನ ಮಾತುಗಳನ್ನು ಲಕ್ಷಿಸಿ ಕಾರ್ಯ ಪ್ರವೃತ್ತರಾದರು. ಅಲ್ಲಿನ ಜನರು ಈಗ ನನಗೆ ಬರೆಯುತ್ತಾರೆ. ಬಹಳ ಉತ್ತಮ ವ್ಯವಸ್ಥೆ ಈಗ ಅಲ್ಲಿದೆ ಎಂದು. ಅವರು ನನ್ನ ಮಾತನ್ನು ಆಲಿಸಿ ಅದರ ಪ್ರಕಾರ ವರ್ತಿಸಲು ಪೂರ್ಣ ರೂಪದಲ್ಲಿ ಪ್ರಯತ್ನಿಸಿದರು. ಆದುದರಿಂದ ಅವರ ವ್ಯವಸ್ಥೆ ಉತ್ತಮಗೊಂಡಿತು.

ಜರ್ಮನಿಯವರು ಸಹ ಇದೇ ರೀತಿ ಕಾರ್ಯ ಪ್ರವೃತ್ತರಾದರೆ **ಇನ್‌ಶಾ ಅಲ್ಲಾಹ್** ಅಲ್ಲಿನ ವ್ಯವಸ್ಥೆ ಉತ್ತಮಗೊಳ್ಳುವುದು. ಸಾಮಾನ್ಯ ಕಾರ್ಯಕರ್ತರು ಮತ್ತು ಜಮಾಅತಿನ ವ್ಯಕ್ತಿಗಳು ನೊಂದು ಬರೆಯುತ್ತಾರೆ. ಇನ್ನು ಮುಂದೆ ಸಹ ಬರೆಯಬಹುದು. ಆದರೆ ಅಲ್ಲಿನ ನ್ಯಾಶನಲ್ ಹದ್ದೇದಾರರು ತಮ್ಮ ಗೂಡುಗಳಿಂದ ಹೊರಗೆ ಬರಬೇಕಾಗಿದೆ. ಅವರು ಬೇಗನೇ ಹೊರಗೆ ಬರಲಿ. ಅವರು ತಮ್ಮನ್ನು ಅಧಿಕಾರಿಗಳು ಎಂದು ಭಾವಿಸದೆ ತಾವು ಸೇವಕರು ಎಂದು ಭಾವಿಸಿ ಜಮಾಅತಿನ ಸೇವೆ ಮಾಡಲಿ. ಇಂತಹ ಭಾವನೆ ಅವರು ತಮ್ಮಲ್ಲಿ ಸೃಷ್ಟಿಸಬೇಕಾಗಿದೆ. ಅಲ್ಲಾಹನು ಅವರಿಗೆಲ್ಲಾ ಹಾಗೆ ಮಾಡುವ ಭಾಗ್ಯ ನೀಡಲಿ. ನಮ್ಮ ಜಮಾಅತ್‌ಗೆ ದೊರಕುತ್ತಿರುವ ಜಯಗಳು ಅಲ್ಲಾಹನ ಅನುಗ್ರಹ ಮೂಲಕ ಲಭಿಸಿದವು ಎಂದು ಕೃತಜ್ಞತೆ ಅರ್ಪಿಸಿರಿ. ವಿನಯದಿಂದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದರಲ್ಲಿ ಮುಂದುವರಿಯಲು ಪ್ರಯತ್ನಿಸಿರಿ. ಎಲ್ಲಾ ಹುದ್ದೇದಾರರಲ್ಲಿ ಈ ಮನೋಭಾವ ಉಂಟಾಗುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನ ಅನುಗ್ರಹಗಳನ್ನು ಮೊದಲಿಗಿಂತಲೂ ಹೆಚ್ಚಾಗಿ ಗಳಿಸುವ ಭಾಗ್ಯ ನಮಗೆ ದೊರಕಲಿ. – ಆಮೀನ್.

––––––––––––––––*****––––––––––––––––

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 20-06-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By**: Kannada Khutuba Desk** (comes under the **Kannada Isha'at Team**)*

*Ahmadiyya Muslim Jama`at, Karnataka*

*Email*: **khutuba.kannada@gmail.com**